# ಮಲ್ಯ ಎಸ್ಟೇಟಿನ ಕಾಯಿಪಲ್ಯ

ಚಿತ್ರ– ಲೇಖನ: **ವಿ.ಬಾಲಕೃಷ್ಣ ಶಿರ್ವ**





ವಿಟ್ಲದಿಂದ ಪುಣಚೆಗಾಗಿ ಸೂರ್ಣಕಟ್ಟೆಗೆ ಪಯಣಿಸಿ ಅಲ್ಲಿಂದ ಎಡಕ್ಕೆ ತಿರುಗಿ ನಾಲ್ಕು ಕಿಲೋ ಮೀಟರ್ ದಾಟಿದರೆ ಮಲ್ಯ ಎಸ್ಟೇಟ್ ತಲುಪಬಹುದು. ಇದು ಬೃಹತ್ ಆಡಿಕೆ, ತೆಂಗು, ಮಾವು, ಮರಗಿಡಗಳ ಸಂಕಲನದ ಎಸ್ಟೇಟ್. ಸುಮಾರು 50 ಎಕರೆ ಭೂಮಿಯಲ್ಲಿ ಶಂಕರನಾರಾಯಣ ಭಟ್‌ರವರು ಕೃಷಿ ಮಾಡಿದ್ದಾರೆ. ಮನೆಯ ಮುಂದೆ ದೊಡ್ಡ ಕೊಳವಿದೆ. ನಾಲ್ಕು ವರ್ಷಗಳ ಹಿಂದೆ ಈ ತೋಟದಲ್ಲಿ ಬೃಹತ್ ತರಕಾರಿ ಮೇಳವೊಂದನ್ನು ಆಯೋಜಿಸಲಾಗಿತ್ತು. ಎಸ್ಟೇಟ್‌ನಲ್ಲಿ ಬೆಳೆದ ವೈವಿಧ್ಯಮಯ, ವಿಶಿಷ್ಟ ತರಕಾರಿಗಳನ್ನು ಪ್ರದರ್ಶನಕ್ಕಿಡಲಾಗಿತ್ತು. ತರಕಾರಿ ಮೇಳ ನಿಜಕ್ಕೂ ಯಶಸ್ವಿಯಾಗಿತ್ತು.

ಸುಮಾರು 2 ಎಕರೆ ಪ್ರದೇಶದಲ್ಲಿ ಇವರು ತರಕಾರಿ ಬೆಳೆಸಿದ್ದಾರೆ. ಕರಾವಳಿಯಲ್ಲಿ ಬೀನ್ಸ್ ಬೆಳೆದು ಯಶಸ್ವಿಯಾದವರಲ್ಲಿ ಇವರು ಪ್ರಮುಖರು. ಇದರ ಜೊತೆಗೆ 6 ಜಾತಿಯ ಅಲಸಂಡೆಗಳಿವೆ. ಕೆಂಪು, ಬಿಳಿ, ಹಸಿರು, ಮೀಟರ್ ಅಲಸಂಡೆಗಳು ಆಕರ್ಷಕವಾಗಿವೆ.

ಹೀರೇಕಾಯಿಯಲ್ಲೂ ವಿಶಿಷ್ಟ ತಳಿಗಳಿದ್ದು ಗೊಂಚಲು ಹೀರೇಕಾಯಿ ಅದ್ಭುತವಾಗಿದೆ. ಇದರ ಒಂದು ಲಕ್ಷಣವೆಂದರೆ, ಎಳಯದಿದ್ದಾಗ ಮುಳ್ಳುಸೌತೆ ತಿಂದ ಹಾಗೆ ರುಚಿಯಾಗಿರುತ್ತದೆ. ಇದು ಸಲಾಡ್‌ಗೆ ಸೂಕ್ತ. ಕೇರಳೀಯ ತಳಿಯಿದು. ದಾರವಿರುವ ಬೃಹತ್ ಹೀರೇಕಾಯಿ, ದಾರ ಸಣ್ಣಕ್ಕಿರುವ ನಯವಾದ 6 ಅಡಿ ಉದ್ದಕ್ಕೆ ಬೆಳೆಯುವ ಹೀರೇಕಾಯಿ ಚಪ್ಪರದಲ್ಲಿ ಗಮನ ಸೆಳೆಯುತ್ತದೆ. ಪಡುವಲ ಕಾಯಿಯೂ ಬಿಳಿ, ಹಸಿರು ಮಿಶ್ರಿತವಾಗಿದೆ. ಚಪ್ಪರದಿಂದ ನೆಲಕ್ಕೆ ತಾಗಿರುವ ಹಾಗಲಕಾಯಿ ಅದ್ಭುತವಾಗಿ ಕಾಣಿಸುತ್ತದೆ. ಕೆಲವು ಸುಮಾರು 8 ಆಡಿ ಉದ್ದ ಬೆಳೆದಿದೆ.

ಹವಾಯಿ ಸೋರೆಕಾಯಿ (ಹವಾಯಿಂದ ಬೀಜ ತಂದು ಬಿತ್ತಿದ್ದು) ಕಣ್ಮನ ಸೆಳೆಯುತ್ತದೆ. ಚೀನಿಕಾಯಿ ಯಾನೆ ಕುಂಬಳಕಾಯಿಯಲ್ಲಿ ವೈವಿಧ್ಯಗಳಿವೆ. ಚೀನಿ ಕಾಯಿಯಲ್ಲಿ ಬಟನೆಸ್ ಸ್ಕಾಚ್ (ಇಂಗ್ಲೆಂಡಿನ ತಳಿ) ಇದರ ಸಲಾಡ್ ಅತ್ಯಂತ ರುಚಿಕರ. ಪಾಯಸಕ್ಕೂ ಬಳಸಲಾಗುತ್ತದೆ. ಒಂದು ಚೀನಿ ಕಾಯಿ 5 ರಿಂದ 8 ಕೆ.ಜಿ. ತೂಗುತ್ತದೆ. ಇನ್ನೊಂದು ವಿಧದ ಚೀನಿ ಕಾಯಿ ಯಾನೆ ಕುಂಬಳ ಮೂಸುಂಬಿ ಆಕಾರದಲ್ಲಿದೆ. ಕೆಲವು ಗೋಲಿಯಾಕಾರದ್ದೂ ಇದೆ!

ಅಮೆರಿಕಾದಿಂದ ಬೀಜ ತಂದು ಬೆಳೆಯಿಸಿದ 12 ಅಡಿ ಎತ್ತರದ ಕೆಸು (ಸುವರ್ಣಗಡ್ಡೆ) ನೋಡಲು ಸೊಗಸಾಗಿದೆ. ಒಂದು ಕೆಸುವಿನ ಗಿಡದಿಂದ ಗಂಟನ್ನು ಮುರಿದು ಸಿಪ್ಪೆ ತೆಗೆದು ತಿಂದರೆ ಕಲ್ಲಂಗಡಿಯ ರುಚಿ! ಇದನ್ನೂ ಹೆಚ್ಚಾಗಿ ಸಲಾಡ್‌ಗೆ ಬಳಸುತ್ತಾರೆ.

ಉರುಟಾದ ಕುಂಬಳಕಾಯಿ ಯಾನೆ ಚೀನಿ ಕಾಯಿಯಂತೆ ಕಾಣುವ ಸೌತೆ, ಮಡೆ ಸೌತೆ, ಮೂಸುಂಬಿಯಾಕಾರದ ಸೌತೆ, ಇದಕ್ಕೆಲ್ಲಾ ಮುಕುಟವಿಟ್ಟಂತೆ ಬಳ್ಳಿ ಬಟಾಟೆಯ ಚಪ್ಪರವೂ ಇದೆ.